# ಮೌಢ್ಯ

■ ಸುಶೀಲಾ ಸೋಮಶೇಖರ್



ವಿಜಯ ಕುಮಾರಿ

ಗೂಬೆಯೊಂದು ಕೂಗಲದುವೆ
ಕೇಡು ಎನುವರು
ಬೆಕ್ಕು ಅಡ್ಡ ಬರಲು ಒಡನೆ
ಅಶುಭವೆನುವರು

ತಾರೆಯೊಂದು ಬೀಳೆ ಕೆಳಗೆ
ಭಯದಿ ನಡುಗಿ ಬಿಡುವರು
ಧೂಮಕೇತು ಕಂಡರಂತು
ಮರಣವೆಂಬರು

ರೋಗ ರುಜಿನ ಕಾಡಿದಲ್ಲಿ
ತಾಯ್ತ ಬಿಗಿವರು
ವೈದ್ಯರಲ್ಲಿ ತೋರಲವರು
ಮುಂದೆ ಹೋಗರು

ಹರಕೆ ಹೊತ್ತು ದೇವರಿಗೆ
ಪ್ರಾಣಿ ಬಲಿಯ ಕೊಡುವರು
ನೂರು ವ್ರತದ ಹೆಸರಿನಲ್ಲಿ
ಉಪವಾಸವಿರುವರು

ಏನು ಕಲಿತರೇನು ಜನರು
ಮೌಢ್ಯ ತೊರೆಯರು
ಹೊಸತನದ ಬಾಳ ಬಗೆಗೆ
ಮೂಗು ಮುರಿವರು

## ಕುಂಚ ಪ್ರಪಂಚ



**ಶರತ್ ಚಂದ್ರ ಎಸ್.**
6ನೇ ತರಗತಿ, ಡೆಲ್ಲಿ ಪಬ್ಲಿಕ್ ಸ್ಕೂಲ್
ಬೆಂಗಳೂರು ದಕ್ಷಿಣ








**ಕೀರ್ತನಾ ಎಸ್.**
7ನೇ ತರಗತಿ ಟ್ರಾನ್ಸ್‌ಸೆಂಡ್
ಶಾಲೆ ಯಲಚೇನಹಳ್ಳಿ
ಬೆಂಗಳೂರು